International Journal of Kannada Research 2016; 2(2): 01-05

International Journal of Kannada Research
www.kannadajournal.com

ISSN: 2454–5813
IJSR 2016; 2(2): 01-05
© 2016 IJKS
www.kannadajournal.com
Received: 01-12-2015
Accepted: 04-01-2016

**ಡಾ.ಪಿ.ನಾಗಭೂಷಣಗೌಡ**
ಉಪನ್ಯಾಸಕರು,
ದಾವಣಗೆರೆ ವಿಶ್ವವಿದ್ಯಾನಿಲಯ,
ದಾವಣಗೆರೆ–೫೭೭೦೦೨

**Correspondence**
**ಡಾ.ಪಿ.ನಾಗಭೂಷಣಗೌಡ**
ಉಪನ್ಯಾಸಕರು,
ದಾವಣಗೆರೆ ವಿಶ್ವವಿದ್ಯಾನಿಲಯ,
ದಾವಣಗೆರೆ–೫೭೭೦೦೨

# ಮೈಸೂರು ಸಂಸ್ಥಾನದಲ್ಲಿ ರಾಷ್ಟ್ರೀಯತೆಯ ಕಿಚ್ಚು: ಹ್ಯಾಮಿಲ್ಟನ್ ಸತ್ಯಾಗ್ರಹ ಮತ್ತು ಕೆ.ಜಿ.ಎಫ್. ಸತ್ಯಾಗ್ರಹಗಳನ್ನು ಕುರಿತು ಒಂದು ನೋಟ

**ಡಾ.ಪಿ.ನಾಗಭೂಷಣಗೌಡ**

ಶಿವಪುರ ಧ್ವಜ ಸತ್ಯಾಗ್ರಹದ ನಂತರದ ಪ್ರಮುಖ ಘಟನೆಗಳೆಂದರೆ ಕೋಲಾರ ಜಿಲ್ಲೆಯ ವಿದುರಾಶ್ವತ್ಥ ದುರಂತ, ಪತ್ರಿಕಾ ಸ್ವಾತಂತ್ರ್ಯದ ಮುಟ್ಟುಗೋಲು, ಹ್ಯಾಮಿಲ್ಟನ್ ಸತ್ಯಾಗ್ರಹ, ಕಾಂಗ್ರೆಸ್ ನಾಯಕರ ದಸ್ತಗಿರಿ, ಪ್ರಮುಖ ಸತ್ಯಾಗ್ರಹಿ ಕಾಂಗ್ರೆಸ್ಸಿಗರನ್ನು ಮೈಸೂರು ಸಂಸ್ಥಾನದಿಂದ ಹೊರಹಾಕಿದ್ದು ಮುಂತಾದವುಗಳು. ಹ್ಯಾಮಿಲ್ಟನ್ ಸತ್ಯಾಗ್ರಹ ಮೈಸೂರು ನಗರಕ್ಕೆ ಸೀಮಿತವಾಗಿದ್ದರೂ ಅದು ಸಂಸ್ಥಾನದಲ್ಲಿ ಭಾರತೀಯತೆಯ ಕಿಚ್ಚನ್ನು ಹೊತ್ತಿಸಿದ ಪ್ರಮುಖ ಘಟನೆಗಳಲ್ಲಿ ಒಂದು.

ಹ್ಯಾಮಿಲ್ಟನ್ ಒಬ್ಬ ಆಂಗ್ಲ ವ್ಯಕ್ತಿಯಾಗಿದ್ದು ಮೈಸೂರಿನ ಪೋಲೀಸ್ ಮಹಾನಿರ್ದೇಶಕರಾಗಿ (ಐಜಿಪಿ) ಸೇವೆ ಸಲ್ಲಿಸಿರುತ್ತಾನೆ. ಈ ಹಿಂದೆ ಮುಂಬೈ ಮೇಯರ್ ಕೆ.ಎಫ್ ನಾರಿಮನ್ ಬೆಂಗಳೂರಿನಲ್ಲಿ ಬಂಧಿತರಾದಾಗ ಅದರ ವಿರುದ್ಧ ನಡೆದ ಹರತಾಳದಲ್ಲಿ ಶಾಂತಿಯುತ ಸಮುದಾಯದ ಮೇಲೆ ಮನಸ್ವಿ ಗುಂಡು ಹಾರಿಸಿ ನಾಲ್ವರನ್ನು ಆಹುತಿ ತೆಗೆದುಕೊಂಡ ಧೂರ್ತ ಅಧಿಕಾರಿಯೇ ಹ್ಯಾಮಿಲ್ಟನ್[೧] ಈ ಅಧಿಕಾರಿ ತನ್ನ ಕ್ರೂರ ದಬ್ಬಾಳಿಕೆಯಿಂದ ಮದರಾಸು (ಈಗಿನ ಚೆನ್ನೈ) ಪ್ರಾಂತ್ಯದಲ್ಲಿ ಸ್ವಾತಂತ್ರ್ಯ ಚಳವಳಿಯನ್ನು ಮೂಲೆ ಗುಂಪು ಮಾಡಿದ್ದ[೨]. ವಿದುರಾಶ್ವತ್ಥ ದುರಂತ ಮತ್ತು ವಿದುರಾಶ್ವತ್ಥ ದುರಂತ ವಿಚಾರಣಾ ಸಮಿತಿಯ ವರದಿಯಲ್ಲೂ ಆ ಅಧಿಕಾರಿ ಎದ್ದು ಕಾಣುವಂತೆ ಉಲ್ಲೇಖಿತನಾಗಿದ್ದಾನೆ.[೩] ಮೈಸೂರು ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್‌ರು ಪೊಲೀಸ್ ಸ್ಟೇಷನ್ ಕಟ್ಟಡವೊಂದಕ್ಕೆ 'ಹ್ಯಾಮಿಲ್ಟನ್ ಬಿಲ್ಡಿಂಗ್' ಎಂದು ನಾಮಕರಣ ಮಾಡುತ್ತಾರೆ. ಇದರ ವಿರುದ್ಧ ನಡೆದ ಸತ್ಯಾಗ್ರಹವೇ 'ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹ' ಎಂದು ಪ್ರಸಿದ್ಧಿಯಾಯಿತು.

ಮೈಸೂರು ಸರಕಾರವು ಮೈಸೂರಿನ ದೊಡ್ಡ ಪೇಟೆಯ ಚೌಕದಲ್ಲಿ ಆಗ್ನೇಯ, ನೈಋತ್ಯ, ಈಶಾನ್ಯ, ವಾಯುವ್ಯ ಹೀಗೆ ನಾಲ್ಕು ಕಡೆಗೂ ಒಂದೇ ತೆರನ ನಾಲ್ಕು ಕಟ್ಟಡಗಳನ್ನು ಕಟ್ಟಿಸಿತು. ಈಶಾನ್ಯ ಭಾಗದಲ್ಲಿದ್ದ ಕೇಂದ್ರ ಕಟ್ಟಡಕ್ಕೆ ಮೈಸೂರಿನ ಆಂಗ್ಲ ಐಜಿಪಿಯಾಗಿದ್ದ ಹ್ಯಾಮಿಲ್ಟನ್ ಎಂಬಾತನ ಹೆಸರನ್ನು ಕೊಟ್ಟಿದ್ದು ಜನರಿಗೆ ರುಚಿಸಲಿಲ್ಲ.

ಇದರ ವಿರುದ್ಧ ಮೈಸೂರಿನ ನಾಯಕರು ಹೋರಾಟ ರೂಪಿಸಲು ಸಿದ್ದತೆ ನಡೆಸಿದರು. ತಗಡೂರು ರಾಮಚಂದ್ರ ರಾಯರು ೨೫ ನೇ ಡಿಸೆಂಬರ್ ೧೯೩೮ ರಲ್ಲಿ ಈ ಕಟ್ಟಡ ರೈತರ ತೆರಿಗೆಯಿಂದ ಕಟ್ಟಿದ್ದೇ ವಿನಃ ಹ್ಯಾಮಿಲ್ಟನ್ ದೇಣಿಗೆಯಿಂದ ಅಲ್ಲ. ಆದ್ದರಿಂದ ಹ್ಯಾಮಿಲ್ಟನ್ ಎಂಬ ಹೆಸರನ್ನು ಬದಲಾಯಿಸಬೇಕೆಂದು ತಿಳಿಸಿದರು.[೪] ಎ.ಎನ್. ಸೂರ್ಯನಾರಾಯಣರಾಯರು, ಎಂ.ಎನ್. ಜೋಯಿಸರು, ಸುಬ್ಬರಾವ್ ಉಪಾಧ್ಯಾಯರು ಹ್ಯಾಮಿಲ್ಟನ್ ಭವನದ ನಾಮಕರಣದ ವಿರುದ್ಧ ಚಳವಳಿ ಹೂಡಲು ನಿರ್ಧರಿಸಿದರು. ಹ್ಯಾಮಿಲ್ಟನ್ ಸತ್ಯಾಗ್ರಹ ಸಮಿತಿಯು ಸರ್ಕಾರಕ್ಕೆ ಒಂದು ಸುತ್ತೋಲೆಯನ್ನು ಕಳಿಸಿ ೧೯೩೯ ರ ಫೆಬ್ರುವರಿ ೧ ರೊಳಗೆ ಕಟ್ಟಡಕ್ಕೆ ಇಟ್ಟಿರುವ ಹೆಸರನ್ನು ಬದಲಾಯಿಸುವಂತೆ ಗಡುವು ನೀಡಿತು. ತಪ್ಪಿದರೆ ಚಳವಳಿಯನ್ನು ಆರಂಭಿಸುವ ಎಚ್ಚರಿಕೆಯನ್ನು ನೀಡಿತು.[೫] ಮೈಸೂರು ಸೋನಾರ್ ಬೀದಿಯಲ್ಲಿದ್ದ ಎಂ.ಎನ್.ಜೋಯಿಸರ ಮನೆಯೇ ಸತ್ಯಾಗ್ರಹಿಗಳ ಕೇಂದ್ರವಾಗಿತ್ತು. ಈ ನಾಮಕರಣ ಅಸಂಬದ್ಧವೆಂದು ಬಗೆದ ತಗಡೂರರು ಸತ್ಯಾಗ್ರಹ ಹೂಡುವಂತೆ ಕಾಂಗ್ರೆಸ್ ಮುಂದಾಳುಗಳಲ್ಲಿ ಒತ್ತಾಯ ಹೇರುತ್ತಾರೆ. ಆದರೆ ಕಾರ್ಯಕಾರಿ ಸಮಿತಿಯು ಇಂಥ ವಿಷಯಗಳಲ್ಲಿ ಕಾಂಗ್ರೆಸ್ ಸತ್ಯಾಗ್ರಹವನ್ನು ಆರಂಭಿಸಲಾರದೆಂದೂ ಯಾರಾದರೂ ವೈಯಕ್ತಿಕವಾಗಿ ಮಾಡಬಹುದೆಂದೂ ಸೂಚಿಸಿತು.[೬]

ಆಗ ತಗಡೂರರು ಸತ್ಯಾಗ್ರಹದ ಸಿದ್ಧತೆಗಳನ್ನು ಮಾಡಿಕೊಂಡು ೧೯೩೯ ನೇ ಫೆಬ್ರುವರಿ ೧೫ ನೇ ತಾರೀಕು ಸತ್ಯಾಗ್ರಹವನ್ನಾಚರಿಸಲು ನಿರ್ಧರಿಸಿ ಪ್ರಾರ್ಥಿಸಿದರು.[೭] ಫೆಬ್ರುವರಿ ೧೫ ರಿಂದ ಬೆಳಿಗ್ಗೆ ೮ ಗಂಟೆಗೆ ಸುಬ್ಬರಾಯನಕೆರೆ ಮೈದಾನದಿಂದ ಪ್ರತಿದಿನ ಇಬ್ಬರು ಸತ್ಯಾಗ್ರಹಿಗಳು ಒಂದು ಕೈಯಲ್ಲಿ ಸುಣ್ಣದ

(ಲೈಮ್) ಗಡಿಗೆಯನ್ನು ಮತ್ತೊಂದು ಕೈಯಲ್ಲಿ ಬ್ರಷ್ ತೆಗೆದುಕೊಂಡು ಸೆಂಟ್ರಲ್ ಪೊಲೀಸ್ ಠಾಣೆ ಹತ್ತಿರಕ್ಕೆ ಕಾಲುನಡಿಗೆಯಿಂದ ಶಾಂತಿಯುತವಾಗಿ ಸಾಗಿ 'ಹ್ಯಾಮಿಲ್ಟನ್ ಬಿಲ್ಡಿಂಗ್' ಎಂಬ ಬೋರ್ಡಿಗೆ ಸುಣ್ಣ ಬಳಿಯುವುದು. ಪೊಲೀಸರು ತಡೆದರೆ ಅಲ್ಲಿನ ಪಾರ್ಶ್ವಭಾಗದಲ್ಲಿ ಕುಳಿತು ಸತ್ಯಾಗ್ರಹ ನಡೆಸುವುದು ಎಂದು ಸತ್ಯಾಗ್ರಹಿಗಳಿಗೆ ಮಾರ್ಗದರ್ಶನ ನೀಡಲಾಯಿತು.[೮]

ಆದರೆ ಫೆಬ್ರುವರಿ ೧೩ ರಂದೇ ಸೋಮವಾರ ಮುಂಜಾನೆಯೇ ತಗಡೂರರನ್ನು ಬಂಧಿಸುತ್ತಾರೆ.[೯] ಮ್ಯಾಜಿಸ್ಟ್ರೇಟರು ಅವರಿಗೆ ನೂರು ರೂಪಾಯಿಗಳ ಎರಡು ಜಾಮೀನು ಕೇಳುತ್ತಾರೆ. ತಗಡೂರರು ಜಾಮೀನು ಕೊಡದೇ ಇದ್ದುದರಿಂದ ಜೇಲಿಗೊಯ್ಯಲ್ಪಟರು. ದಿನಾಂಕ ೨೦-೨-೧೯೩೯ ರಂದು ಖಟ್ಲೆ ನಡೆದು ಒಂದು ವರ್ಷ ಶಿಕ್ಷೆಯಾಯಿತು. ತಗಡೂರರು ಹ್ಯಾಮಿಲ್ಟನ್ ಸತ್ಯಾಗ್ರಹದ ಸಂಬಂಧವಾಗಿ ಈ ರೀತಿ ಹೇಳಿಕೆ ಹೊರಡಿಸಿದರು. "ಪೊಲೀಸ್ ಇನ್ಸಪೆಕ್ಟರ್ ಜನರಲ್ಲರಾಗಿದ್ದ ಶ್ರೀ ಹ್ಯಾಮಿಲ್ಟನ್‌ರ ವ್ಯಕ್ತಿ ವಿಷಯಕ್ಕೆ ಸತ್ಯಾಗ್ರಹವಲ್ಲ" [೧೦] **ನಿಗದಿಯಂತೆ ಹ್ಯಾಮಿಲ್ಟನ್ ಬಿಲ್ಡಿಂಗ ಸತ್ಯಾಗ್ರಹವು ೧೯೩೯ ರ ಫೆಬ್ರುವರಿ ಸತ್ಯಾಗ್ರಹ ನಡೆಸುತ್ತಿದ್ದರು. ಸತ್ಯಾಗ್ರ**ಹಿಗಳೊಂದಿಗೆ ಮೆರವಣಿಗೆಯು ಸುಬ್ಬರಾಯನ ಕೆರೆ ಮೈದಾನದಿಂದ ಪ್ರಾರಂಭವಾಗುತ್ತಿತ್ತು. ಸತ್ಯಾಗ್ರಹಿಗಳಿಬ್ಬರೂ ಸುಣ್ಣದ ಗಡಿಗೆ ಮತ್ತು ಕಸಬರಿಗೆಯಿಂದ ಮಾಡಿದ ಬ್ರಷ್ ಹಿಡಿದು ಹೊರಡುತ್ತಿದ್ದರು. 'ಡೌನ್ ವಿತ್ ಹ್ಯಾಮಿಲ್ಟನ್' ಎಂಬ ಘೋಷಣೆಯನ್ನು ಕೂಗಲಾಗುತ್ತಿತ್ತು. ಸಾಯಂಕಾಲದಲ್ಲಿ ನಡೆವ ಸಭೆಯಲ್ಲಿ ಮರುದಿನದ ಸತ್ಯಾಗ್ರಹಿಗಳನ್ನು ಆರಿಸಲಾಗುತ್ತಿತ್ತು.[೧೧] ಚಾಮುಂಡಯ್ಯ ಎಂಬ ಬೊಂಬಿನ ವ್ಯಾಪಾರಿ ಯೊಬ್ಬರು ಬೊಂಬುಗಳು, ಸುಣ್ಣ ಹೊಡೆಯುವ ಮಟ್ಟೆ, ತೆಂಗಿನ ಮಟ್ಟೆ, ಸುಣ್ಣದ ಮಡಿಕೆ ಇವುಗಳನ್ನು ಸರಬರಾಜು ಮಾಡುತ್ತಿದ್ದರು.[೧೨] ಈ ಸತ್ಯಾಗ್ರಹ ೧೫ ನೇ ತಾರೀಖು ಪ್ರಾರಂಭವಾಗಿ ಮಾರ್ಚ್ ೩೧, ೧೯೩೯ ರ ವರೆಗೆ ಒಂದೂವರೆ ತಿಂಗಳು ಕಾಲ ನಡೆಯುತ್ತದೆ. ಊರೂರುಗಳಿಂದ ಸತ್ಯಾಗ್ರಹಿಗಳು ಬಂದು ಭಾಗವಹಿಸಿ ಬಂಧಿತರಾದರು.

ಪ್ರಥಮ ದಿನವಾದ ಫೆಬ್ರುವರಿ ೧೫ ರಂದು ಬೆಳಿಗ್ಗೆ ೭.೪೫ ಕ್ಕೆ ಸುಬ್ಬರಾಯನ ಕೆರೆಯ ಮೈದಾನದಲ್ಲಿ ನೂರಾರು ಮಂದಿ ಸೇರಿದ್ದಿತು. ತಗಡೂರು ರಾಮಚಂದ್ರರಾಯರನ್ನು ಈಗಾಗಲೇ ಬಂಧಿಸಿದ್ದರಿಂದ ಸತ್ಯಾಗ್ರಹಿಗಳಾಗಿ ಬಿ. ಸುಬ್ಬರಾವ್ ಉಪಾಧ್ಯಾಯ ಮತ್ತು ಎಂ.ಶ್ಯಾಮರಾವ್ ಅವರು ಆಯ್ಕೆಯಾದರು. ಇಬ್ಬರೂ ಮುಖಂಡರು ೮ ಗಂಟೆಗೆ ಸ್ಥಳಕ್ಕೆ ಬಂದರು. ಆ ಸಂದರ್ಭದಲ್ಲಿ ಸತ್ಯಾಗ್ರಹಿಗಳನ್ನುದ್ದೇಶಿಸಿ ಮಾತನಾಡಿದ ಸುಬ್ಬರಾವ್ ಉಪಾಧ್ಯಾಯರು "ನಮ್ಮ ಸತ್ಯಾಗ್ರಹವು ಸಾರ್ವಜನಿಕರ ಹಿತಾಸಕ್ತಿಯನ್ನು ಕಾಪಾಡುವುದ್ದಾಗಿದ್ದು ಕಟ್ಟಡಕ್ಕೆ ಇಟ್ಟಿರುವ ಹ್ಯಾಮಿಲ್ಟನ್ ಹೆಸರನ್ನು ಸರ್ಕಾರ ವಾಪಾಸ್ ತೆಗೆದುಹಾಕುವವರೆಗೂ ನಡೆಸಲಾಗುವುದು, ಭಾರತ ಒಕ್ಕೂಟದಡಿ ಜವಾಬ್ದಾರಿ ಸರ್ಕಾರ ರಚನೆಯಾದಾಗ ಮಾತ್ರ ಇಂತಹ ಅಚಾತುರ್ಯ ನಡೆಯಲಾರವು" ಎಂದು ತಿಳಿಸಿದರು.

ಬೆಳಿಗ್ಗೆ ೮ ಗಂಟೆಗೆ ಸುಬ್ಬರಾಯನ ಕೆರೆಯ ಮೈದಾನದಿಂದ ಸುಮಾರು ೨೦೦ ಜನರನ್ನೊಳಗೊಂಡ ಸತ್ಯಾಗ್ರಹ ಮೆರವಣಿಗೆ ಪ್ರಾರಂಭವಾಯ್ತು. ಸುಬ್ಬರಾವ್ ಒಂದು ಕೈಯಲ್ಲಿ ಸುಣ್ಣದ ಮಡಿಕೆ ಮತ್ತೊಂದು ಕೈಯಲ್ಲಿ ಸುಣ್ಣ ಬಳಿಯುವ ಬ್ರಷ್ ಹಿಡಿದಿದ್ದು ಎಂ.ಶಾಮರಾವ್ ತ್ರಿವರ್ಣ ಧ್ವಜವನ್ನು ಹಿಡಿದು ಹೊರಟರು. ಈ ಮೆರವಣಿಗೆಯು ಅಗ್ರಹಾರ, ಸಂತೇಪೇಟೆ, ಲಾನ್ಸ್‌ಡಾನ ಬಜಾರ್, ದೊಡ್ಡ ಪೇಟೆ ಮಾರ್ಗವಾಗಿ ಹೊರಟಿತು. ಪೊಲೀಸ್ ಸೂಪರಿಂಟೆಂಡೆಂಟ್ ಎಂ.ರಂಗಸ್ವಾಮಿ ಅಯ್ಯಂಗಾರ್ ಹಾಗೂ ಮ್ಯಾಜಿಸ್ಟ್ರೇಟರ್ ಕೆ.ಪಿ.ರಾಮನಾಥಯ್ಯನವರು ಹಾಜರಿದ್ದರು.[೧೩] ಅಂದಿನ ಸತ್ಯಾಗ್ರಹ ಸ್ಥಳಕ್ಕೆ ಮೈಸೂರು ಕಾಂಗ್ರೆಸ್ ಧುರೀಣರಾದ ಶ್ರೀ.ಎಸ್.ನಿಜಲಿಂಗಪ್ಪ, ಹೆಚ್.ಸಿ.ದಾಸಪ್ಪ, ಸಾಹುಕಾರ್ ಚೆನ್ನಯ್ಯ, ದೊರೆಸ್ವಾಮಿ ಅಯ್ಯಂಗಾರ್ ಭೇಟಿ ನೀಡಿ ಸತ್ಯಾಗ್ರಹಕ್ಕೆ ಶುಭ ಕೋರಿದರು.[೧೪]

ಭವನದ ಮೇಲಿದ್ದ 'ಹ್ಯಾಮಿಲ್ಟನ್ ಭವನ' ಎಂಬ ಅಕ್ಷರಗಳನ್ನು ಸುಣ್ಣದಿಂದ ಹೊಡೆದು ಅಳಿಸುವುದೇ ಸತ್ಯಾಗ್ರಹಿಗಳ ಉದ್ದೇಶವಾಗಿತ್ತು. ಪ್ರತಿ ತಂಡವನ್ನು ಸರಕಾರ ಬಂಧಿಸುತ್ತಿತ್ತು.[೧೫] ಆರಂಭದ ದಿನಗಳಲ್ಲಿ ನಡೆದ ಸತ್ಯಾಗ್ರಹಿಗಳ ವಿವರ ಹೀಗಿದೆ.[೧೬]

೧೫-೨-೧೯೩೯ ಸುಬ್ಬರಾವ್ ಉಪಾಧ್ಯಾಯ ಮತ್ತು ಎಂ ಶಾಮರಾವ್

೧೬-೨-೧೯೩೯ ಎಂ.ಎನ್.ವೆಂಕಟಪ್ಪ, ಹೆಚ್.ಹನುಮಂತಯ್ಯ

೧೭-೨-೧೯೩೯ ದೇವನ ಹಳ್ಳಿ ತಾ॥ ಬೂದಿಗೆರೆಯ ಚಿಕ್ಕ ರುದ್ರಪ್ಪ ಮತ್ತು ನಾರಾಯಣಗೌಡ

೧೮-೨-೧೯೩೯ ಶ್ರೀರಂಗಪಟ್ಟಣ ತಾಲ್ಲೂಕಿನ ಯು.ಕೆಂಚಯ್ಯ ಅರಕೆರಿ ಮತ್ತು ಕೆ.ಆರ್.ಸಾಗರ ತಾ॥ ಸಾಲಿಗ್ರಾಮದ ಎಸ್.ಎಸ್ ಚಕ್ರವರ್ತಿ

೧೯-೨-೧೯೩೯ ಮೈಸೂರಿನ ಎಂ. ಬಿ. ಚಂದ್ರಶೇಖರಯ್ಯ ಮತ್ತು ಕೃಷ್ಣಯ್ಯ ನಾಯ್ಡು

೨೦-೨-೧೯೩೯ ಮೈಸೂರಿನ ಪಿ.ಇ.ರಾಮಯ್ಯ ಮತ್ತು ಎಂ.ಎಸ್. ಸುಬ್ಬೇಗೌಡ

೨೧-೨-೧೯೩೯ ಎಂ.ಎಸ್. ಕೃಷ್ಣಪ್ಪಗೌಡ ಮತ್ತು ಬಿ. ಸಿದ್ದಪ್ಪಗೌಡ (ಮೈಸೂರು)

೨೨-೨-೧೯೩೯ ಕೆ.ಆರ್.ಸಾಗರ ತಾ॥ ಎಂ.ಎಸ್.ಶ್ರೀಕಂಠಯ್ಯ ಮತ್ತು ಸಿ.ಎಸ್.ನಾರಾಯಣಸ್ವಾಮಿ

೨೩-೨-೧೯೩೯ ಚೆನ್ನಪಟ್ಟಣದ ಸಿ.ಲಿಂಗೇಗೌಡ ಮತ್ತು ನಾಗಮಂಗಲ ತಾ॥ ತಿಮ್ಮೇಗೌಡ ಮನಿಯೂರ್

೨೪-೨-೧೯೩೯ ಪಿ.ಎನ್.ಜವರಪ್ಪಗೌಡ ಮತ್ತು ಎಂ.ಜಿ.ಲಿಂಗಾಚಾರ್(ಮೈಸೂರ)

೨೫-೨-೧೯೩೯ ಎಸ್.ಡಿ.ನಾರಾಯಣರಾವ್ ಮತ್ತು ಎಸ್.ರಾಮಸ್ವಾಮಿ (ಮೈಸೂರು)

ಸೆಕ್ಷನ್ ೧೨೪ (ಎ)ಅನ್ವಯ ಪಿ.ಎನ್.ಜವರಪ್ಪಗೌಡರ ವಿರುದ್ಧ ಮೊಕದ್ದಮೆ ಹೂಡಲಾಯಿತು.[೧೭] ಅವರಿಗೆ ಒಂದು ವರ್ಷದ ಕಾಲ ಶಾಂತಿಗೆ ಭಂಗ ತರುವುದಿಲ್ಲವೆಂದು ೨೦೦ ರೂಪಾಯಿ ವೈಯಕ್ತಿಕ ಬಾಂಡ್ ಮತ್ತು ಅದೇ ಮೊತ್ತದ ಇಬ್ಬರು ಜಾಮೀನು ಒದಗಿಸುವಂತೆ ಸೂಚಿಸಲಾಯಿತು. ಜಾಮೀನು ಭದ್ರತೆ ಒದಗಿಸಲು ಅವರು ನಿರಾಕರಿಸಿದ್ದರಿಂದ ಜೈಲಿಗೆ ತಳ್ಳುವಂತೆ ಆದೇಶಿಸಲಾಯಿತು. ಎನ್. ಸೂರ್ಯನಾರಾಯಣರಾವ, ಸುಬ್ಬರಾವ್ ಉಪಾಧ್ಯಾಯ ಹಾಗೂ ಎಂ.ಎನ್.ಜೋಯಿಸ ಅವರ ವಿರುದ್ಧ ಸೆಕ್ಷನ್ ೧೦೭ ರಡಿ ವಿಚಾರಣೆ ನಡೆಸಿ ಜಾಮೀನು ಒದಗಿಸಲು ಕೇಳಲಾಯಿತ್ತು. ಅದನ್ನು ತಿರಸ್ಕರಿಸಿದ್ದಕ್ಕಾಗಿ ಅವರಿಗೆ ಜೇಲು ಶಿಕ್ಷೆ ವಿಧಿಸಲಾಯಿತು.[೧೮]

ಅನೇಕ ಸತ್ಯಾಗ್ರಹಿಗಳ ಮೇಲೆ ಮೈಸೂರು ಪೊಲೀಸ ಕಾಯ್ದೆಯಡಿ ಮೊಕದ್ದಮೆ ಹೂಡಲಾಗುತ್ತದೆ. ಅವರಿಗೆ ಬೇರೆ ಬೇರೆ ರೀತಿಯ ಜೇಲು ಶಿಕ್ಷೆಯನ್ನು ವಿಧಿಸಲಾಗುತ್ತದೆ. ಒಟ್ಟು ೭೦ ಜನ ಸತ್ಯಾಗ್ರಹದಲ್ಲಿ ಬಂಧಿತರಾದರು.[೧೯]

ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹವು ನಿರಂತರವಾಗಿ ಒಂದೂವರೆ ತಿಂಗಳು ನಡೆಯಿತು. ಈ ಸತ್ಯಾಗ್ರಹವು ಯಶಸ್ವಿಯಾಗೆ ನಡೆಯುತಿತ್ತು. ಆದರೆ ಮೈಸೂರು ಕಾಂಗ್ರೆಸ್ಸಿನ ಎರಡನೇ ಅಧೀವೇಶನವೂ ೧೯೩೯ ರ ಏಪ್ರಿಲ್ ೧೫ ರಂದು ವಿದುರಾಶ್ವತ್ಥದಲ್ಲಿ ನಡೆಸಲಿದ್ದುದ್ದರಿಂದ ಹ್ಯಾಮಿಲ್ಟನ್ ಸತ್ಯಾಗ್ರಹವನ್ನು ವಾಪಸು ಪಡೆಯಲಾಯಿತು.

ಇದೊಂದು ವೈಯಕ್ತಿಕ ಸತ್ಯಾಗ್ರಹವಾದರು ಸಹ ಭಾಗವಹಿಸಿದ ಜನ ಅಪಾರ. ಸತ್ಯಾಗ್ರಹಿಗಳಿಗೆ ಬೆಂಬಲ ಸೂಚಿಸಲು ಪ್ರತಿದಿನ ಸತ್ಯಾಗ್ರಹ

ಸ್ಥಳಕ್ಕೆ ಸೇರುತ್ತಿದ್ದ ಜನರ ಸಂಖ್ಯೆಯನ್ನು ನೋಡಿದರೆ ಜನರಲ್ಲಿ ಜಾಗೃತಿ ತರುವಲ್ಲಿ ಯಶಸ್ವಿಯಾಯಿತು.

ತಾತ್ಕಾಲಿಕವಾಗಿ ಸತ್ಯಾಗ್ರಹವೇನೋ ನಿಂತಿತು.ಆದರೆ ಮುಂದೆ ಶ್ರೀ ಕೆ.ಸಿ ರೆಡ್ಡಿ ಅವರ ನೇತೃತ್ವದಲ್ಲಿ ರಚಿತವಾದ ಪ್ರಥಮ ಪ್ರಜಾ ಸರಕಾರದಲ್ಲಿಯೇ ಅಂದಿನ ಮರಾಮತ್ ಸಚಿವರಾಗಿದ್ದ ಶ್ರೀ ನಾಗಮಂಗಲದ ಮರಿಯಪ್ಪನವರು ಈ ವಿಷಯವನ್ನು ಎತ್ತಿಕೊಂಡು ಆ ಹೆಸರನ್ನು ಅಳಿಸುತ್ತಾರೆ.[೨೦] ಹ್ಯಾಮಿಲ್ಟನ್ ಸತ್ಯಾಗ್ರಹ ಸಮಿತಿಯ ಶ್ರಮ ಸಾರ್ಥಕವಾಗುತ್ತದೆ.

**ಕೆ.ಜಿ.ಎಫ್ ಸತ್ಯಾಗ್ರಹ**

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ (ಎಎಂಸಿಸಿ) ಸರ್ವ ಸದಸ್ಯರ ಸಭೆ ಬೆಂಗಳೂರಿನ ಮಲೇಶ್ವರಂನಲ್ಲಿ ೧೯೩೯ ನೇ ಫೆಬ್ರುವರಿಯಲ್ಲಿ ಟಿ.ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಭೆಯ ತೀರ್ಮಾನದಂತೆ ಸುಧಾರಣಾ ಸಮಿತಿ, ನ್ಯಾಯ ವಿಧಾಯಕ ಸಭೆ, ಜಿಲ್ಲಾಬೋರ್ಡ್, ಪ್ರಜಾಪ್ರತಿನಿಧಿ ಸಭೆ, ಪುರಸಭೆಯ ಕಾಂಗ್ರೆಸ್ ಸದಸ್ಯರೆಲ್ಲಾ ರಾಜಿನಾಮೆ ಕೊಟ್ಟರು. ಹೆಚ್.ಬಿ ಗುಂಡಪ್ಪಗೌಡ ಮಾತ್ರ ಕೊಡಲಿಲ್ಲ.[೨೧]

ಕಾಂಗ್ರೆಸ್ಸಿನ ಎರಡನೇ ಅಧಿವೇಶನವನ್ನು ೧೯೩೯ ರ ಏಪ್ರಿಲ್ ೧೫ ರಂದು ಹಿಂದಿನ ವರ್ಷ ದುರಂತ ಸಂಭವಿಸಿದ್ದ ವಿದುರಾಶ್ವತ್ಥದಲ್ಲಿ ಜರುಗಿತು. ಹೆಚ್. ಸಿ. ದಾಸಪ್ಪ ಅವರು ಅಧ್ಯಕ್ಷರಾಗಿದ್ದರು. ಎಮ್ ದೊರೆಸ್ವಾಮಿ ಅವರು ಸ್ವಯಂಸೇವಕರ ಜಿ.ಓ.ಸಿ ಆಗಿದ್ದರು. ನೂರಾರು ಸ್ವಯಂಸೇವಕರು ಹಿಂದೂಸ್ತಾನಿ ಸೇವಾದಳದಿಂದ ತರಬೇತಿ ಪಡೆದಿದ್ದು ಅಧಿವೇಶನ ಮತ್ತು ಪ್ರದರ್ಶನದಲ್ಲಿ ಸೇವೆಸಲ್ಲಿಸಲು ಸಿದ್ದರಾಗಿದ್ದರು. ಲಾವಣಿ ವಿದ್ವಾನ ನೀಲಕಂಠಪ್ಪನವರು ಶಿವಪುರ ಧ್ವಜಸತ್ಯಾಗ್ರಹ ಮತ್ತು ವಿದುರಾಶ್ವತ್ಥ ದುರಂತದ ಬಗ್ಗೆ ಲಾವಣಿ ಹಾಡು ರಚಿಸಿದರು.[೨೨] ಕಾಂಗ್ರೆಸ್ ಧ್ವಜ ಹಾಗೂ ಮೈಸೂರು ಸಂಸ್ಥಾನದ ಗಂಡಭೇರುಂಡ ಧ್ವಜಗಳನ್ನು ಸಮಾನಾಂತರದಲ್ಲಿ ಹಾರಿಸಲಾಯಿತು.[೨೩]

ಕಾಂಗ್ರೆಸ್ಸಿನ ಅಧ್ಯಕ್ಷರಾದ ಹೆಚ್.ಸಿ ದಾಸಪ್ಪನವರು ೧೯೩೯ ರ ಏಪ್ರಿಲ್ ೧೭ ರಿಂದ ೨೩ ರವರೆಗೆ 'ಮೈಸೂರು ಕಾಂಗ್ರೆಸ್ ಸಪ್ತಾಹ' ಆಚರಿಸುವಂತೆ ಜನರಲ್ಲಿ ಮನವಿ ಮಾಡಿದರು. ೨೫೦೦೦ ಜನ ಜವಾಬ್ದಾರಿ ಸರಕಾರ ಸ್ಥಾಪನೆಗೆ ದುಡಿಯುವ ಪ್ರತಿಜ್ಞೆ ತೆಗೆದುಕೊಂಡರು. ಇದರಿಂದ ರಾಜಕೀಯ ಚಳವಳಿ ಇನ್ನಷ್ಟು ಬಿರುಸಾಯಿತು.[೨೪]

ಮೈಸೂರು ಕಾಂಗ್ರೆಸ್ ಸಪ್ತಾಹದ ಅವಧಿಯಲ್ಲಿ ಮೆರವಣಿಗೆ ತೆಗೆಯುವಂತೆ ಹಾಗೂ ಸಭೆಗಳನ್ನು ನಡೆಸುವಂತೆ ಹೆಚ್.ಸಿ.ದಾಸಪ್ಪನವರು ಜನತೆಗೆ ಮನವಿ ಮಾಡಿದರು.[೨೫] ಏಳು ದಿನಗಳ ಕಾಲ ಪ್ರತಿನಿತ್ಯ ಒಂದೊಂದು ಕಾರ್ಯಕ್ರಮ ಹಾಕಿಕೊಳ್ಳಲಾಯಿತು.

| | |
|---|---|
| ೧೭ ನೇ ತಾರೀಕು | Repression day |
| ೧೮ ನೇ ತಾರೀಕು | Patriots day |
| ೧೯ ನೇ ತಾರೀಕು | Hrijana day |
| ೨೦ ನೇ ತಾರೀಕು | Khadi day |
| ೨೧ ನೇ ತಾರೀಕು | Ryots & labourers day |
| ೨೨ ನೇ ತಾರೀಕು | Anti drink day |
| ೨೩ ನೇ ತಾರೀಕು | Responsible Govt day |

ಸರಕಾರದ ದಬ್ಬಾಳಿಕೆ ನೀತಿಯನ್ನು ಖಂಡಿಸಲಾಯಿತು. ಅಲ್ಲದೇ ತಕ್ಷಣವೇ ಜವಾಬ್ದಾರಿ ಸರಕಾರದ ಬೇಡಿಕೆಯನ್ನು ಅಧಿವೇಶನದಲ್ಲಿ ಪಾಸು ಮಾಡಲಾಯಿತು.

ಈ ಅಧಿವೇಶನಕ್ಕೆ ಬಂದಿದ್ದ ಕಮಲಾದೇವಿ ಚಟ್ಟೋಪಾಧ್ಯಾಯ ಅವರಿಗೆ ಕೋಲಾರ ಜಿಲ್ಲಾ ಮ್ಯಾಜಿಸ್ಟ್ರೇಟರು ಪತ್ರ ಬರೆದು (೧೫–೪–೧೯೩೦) ಈ ಅಧಿವೇಶನದಲ್ಲಿ ಭಾಗವಹಿಸಕೂಡದೆಂದು ತಿಳಿಸಿದರು. ಭಾಷಣ ಮಾಡುವುದು ತಮ್ಮ ಆಜನ್ಮ ಸಿದ್ದ ಹಕ್ಕು, ಈ ರೀತಿ ಪತ್ರ ಬರೆಯುವುದು ಮರ್ಯಾದೆಯಲ್ಲವೆಂದು ತಿಳಿಸಿ ಶ್ರೀಮತಿ ಕಮಲಾದೇವಿ ಯವರು ಉತ್ತರ ಬರೆದರು. ಅಧಿವೇಶನದ ನಂತರ ದಾಸಪ್ಪನವರು ಸಂಸ್ಥಾನದಾದ್ಯಂತ ಪ್ರವಾಸ ಮಾಡಿದರು. ಕೆಲ ಕಾಂಗ್ರೆಸ್ ಸದಸ್ಯರು ಜೂನ್ ೧೭, ೧೮, ೧೯ನೇ ತಾರೀಕು ಮುಂಬೈಯಲ್ಲಿ ಗಾಂಧಿ, ನೆಹರು, ಪಟೇಲರನ್ನು ಭೇಟಿ ಮಾಡಿ ಮೈಸೂರಿನ ರಾಜಕೀಯ ಪರಿಸ್ಥಿತಿ ವಿವರಿಸಿದರು.[೨೬]

೧೯೩೯ ನೇ ಜುಲೈ ೮, ೯ ನೇ ತಾರೀಕು ಹಾಸನ ಜಿಲ್ಲೆ ಅರೆಸಿಕೆರೆಯಲ್ಲಿ ಅಖಿಲ ಮೈಸೂರು ಕಾಂಗ್ರೆಸ್ ಸಭೆ ಸೇರಿ ಸರ್ಕಾರದೊಂದಿಗೆ ಮತ್ತೆ ಸಂಧಾನ ಪ್ರಯತ್ನಗಳನ್ನು ನಡೆಸಲು ತೀರ್ಮಾನಿಸಿತು. ಸೆಪ್ಟೆಂಬರ್ ಒಂದನೇ ತಾರೀಕಿನವರೆಗೆ ಸಂಧಾನದ ಮಾತುಕತೆಗಳಿಗೆ ಕಾಲಾವಧಿ ನಿಗದಿಪಡಿಸಿತು. ಕಾಂಗ್ರೆಸ್ ಅಧ್ಯಕ್ಷರು ದಿವಾನರನ್ನು ಭೇಟಿ ಮಾಡಲು ಈ ಸಭೆ ಅನುಮತಿ ನೀಡಿತು.

ಜುಲೈ ೧೩ ರಂದು ದಿವಾನರನ್ನು ಭೇಟಿ ಮಾಡಲು ಕೋರಿ ಪತ್ರ ಬರೆದರು. ಆದರೆ ಭೇಟಿಯು ನಿರಾಕರಿಸಲ್ಪಟ್ಟಿತು. ತಮ್ಮ ತೀರ್ಮಾನವನ್ನು ದಿವಾನರು ಪುನರಾಲೋಚಿಸಬೇಕೆಂದು ಅಧ್ಯಕ್ಷರು ಮತ್ತೊಮ್ಮೆ ಪ್ರಾರ್ಥಿಸಿದರೂ ನಕಾರದ ಉತ್ತರ ದೊರೆಯಿತು.[೨೭]

ಅಖಿಲ ಮೈಸೂರು ಕಾಂಗ್ರೆಸ್ ಮತ್ತೆ ಸಭೆ ಸೇರಿ ಜುಲೈ ೩೦ ನೇ ತಾರೀಕನ್ನು ಜವಾಬ್ದಾರಿ ಸರಕಾರದ ದಿನವನ್ನಾಗಿ ಆಚರಿಸಲು ನಿರ್ಣಯಿಸಿತು. ಅಲ್ಲದೆ ಸರ್ಕಾರ ಅಡ್ಡಿ ತಂದಲ್ಲಿ ಅದನ್ನು ಉಲ್ಲಂಘಿಸಲೂ ಕಾಂಗ್ರೆಸ್ ಅನುಮತಿ ನೀಡಿತು[೨೮]

ಆಗ ಟಿ.ಸಿದ್ದಲಿಂಗಯ್ಯನವರು ಮೈಸೂರು ಕಾಂಗ್ರೆಸ್ ಸರ್ವಾಧಿಕಾರಿಗಳಾಗಿದ್ದರು. ಎಚ್. ಸಿದ್ದಯ್ಯ ಟಿ.ಸುಬ್ರಹ್ಮಣ್ಯ, ತಗಡೂರು ರಾಮಚಂದ್ರರಾವ್, ಎಂ.ಎನ್.ಜೋಯಿಸ್ ಹಾಗು ಶ್ರೀಮತಿ ಲಲಿತಮ್ಮ ಜಿ.ಆರ್.ಸ್ವಾಮಿ ಸೇರಿದಂತೆ ಅನೇಕರನ್ನು ಬಂಧಿಸಿ ಸರಕಾರವು ಜೇಲಿನಲ್ಲಿರಿಸಿತು. ಪ್ರಹ್ಲಾದಶೆಟ್ಟಿ, ಉಗ್ರಪ್ಪ, ಹನುಮಂತಪ್ಪ, ಬಿ.ಕೃಷ್ಣಮೂರ್ತಿ ಸೆರೆಮನೆಯಲ್ಲಿಯೇ ಮೃತರಾದರು.[೨೯]

**ಕೆ.ಜಿ.ಎಫ್. ಸತ್ಯಾಗ್ರಹಕ್ಕೆ ನಾಂದಿ:–**

ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಜನರ ಬೆಂಬಲ ಗಳಿಸುವ ಉದ್ದೇಶದಿಂದ ಕಾಂಗ್ರೆಸ್ ಕಾರ್ಯನಿರ್ವಾಹಕ ಮಂಡಳಿ ಸದಸ್ಯರು ೧೯೩೯ ನೇ ಆಗಸ್ಟ್ ಒಂದನೇ ತಾರೀಕು, ಮೂರು ಗುಂಪುಗಳಲ್ಲಿ ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡರು.[೩೦] ಈ ಪ್ರವಾಸ ಕಾರ್ಯಕ್ರಮದಲ್ಲಿ ಕೆ.ಜಿ.ಎಫ್ ನಲ್ಲಿ ಆಗಸ್ಟ್ ೧೪ ರಂದು ಸಾರ್ವಜನಿಕ ಸಭೆ ನಡೆಯಲು ಏರ್ಪಾಡಾಗಿತ್ತು. ಜವಾಬ್ಬಾರಿ ಸರ್ಕಾರದ ಸ್ಥಾಪನೆಯ ಚಳವಳಿಯ ಸಂಘಟನೆಯ ಬಗ್ಗೆ ಚರ್ಚೆ ನಡೆಸಲು ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ ಬಂಗಾರಪೇಟೆಯ ಪ್ರವಾಸಿ ಮಂದಿರ (ಟ್ರಾವ್ಯೆಲರ್ಸ್) ದಲ್ಲಿ ಸಭೆ ಸೇರಿತ್ತು.

ಇದರಿಂದ ವಿಚಲಿತರಾದ ಜಿಲ್ಲಾ ಮ್ಯಾಜಿಸ್ಟ್ರೇಟರು ಮೈಸೂರು ಪೊಲೀಸ್ ಕಾಯ್ದೆ ೩೯ ನೇ ಕಲಮಿನ ಅನ್ವಯ ನಿಷೇದಾಜ್ಞೆ ಜಾರಿಗೊಳಿಸಿದರು. ಅದು ಜನರ ನಾಗರಿಕ ಹಕ್ಕುಗಳನ್ನು ಮೊಟಕುಗೊಳಿಸಿತು. ಆದರೆ ನ್ಯಾಯವಾದಿಗಳೂ ಆಗಿದ್ದ ಕೆ.ಸಿ.ರೆಡ್ಡಿ, ಕೆ.ಪಟ್ಟಾಭಿರಾಮನ್, ಕೆ.ಸಂಪಂಗಿರಾಮಯ್ಯ ಮುಂತಾದ ಅನೇಕ ಕಾಂಗ್ರೆಸ್ಸಿಗರು ಈ ನಿಷೇದಾಜ್ಞೆಯನ್ನು ಉಲ್ಲಂಘಿಸಿ ಜೈಲು ಶಿಕ್ಷೆಗೆ ಗುರಿಯಾದರು. ಬಂಧಿಸಿದವರನ್ನು ವ್ಯಾನ್‌ನಲ್ಲಿ ಕೆ.ಜಿ.ಎಫ್ ಜೇಲಿಗೆ ಒಯ್ಯದು. ಅದು ಐತಿಹಾಸಿಕ ಕೆ.ಜಿ.ಎಫ್ ಸತ್ಯಾಗ್ರಹಕ್ಕೆ ನಾಂದಿಯಾಯಿತು.

ಈ ಹಿಂದೆ ಹೇಳಿರುವಂತೆ ಅರಸಿಕೆರೆಯಲ್ಲಿ ನಡೆದ

ಎ.ಎಂ.ಸಿ.ಸಿಯಲ್ಲಿ ೧೯೪೭ ನೇ ಆಗಸ್ಟ್ ಕೊನೆಯವರೆಗೆ ಮೈಸೂರು ಸರಕಾರದ ನಿಲುವನ್ನು ಕಾದು ನೋಡಲಾಯಿತು. ಆದರೆ ಏನೂ ಪ್ರಯೋಜನವಾಗಲಿಲ್ಲ, ಸರಕಾರ ನಿಷೇದಾಜ್ಞೆ ಜಾರಿ ಮಾಡಿದ್ದರಿಂದ ಸೆಪ್ಟೆಂಬರ್ ೧ ನೇ ತಾರೀಕು ಕಾಂಗ್ರೆಸ್ ರಚನಾಕ್ರಮವನ್ನು ರದ್ದು ಮಾಡಿ ಶ್ರೀ.ಟಿ.ಸಿದ್ದಲಿಂಗಯ್ಯನವರನ್ನು ಪ್ರಥಮ ಡಿಕ್ಟೇಟರನನ್ನಾಗಿ ನೇಮಿಸಿತು. ಅಲ್ಲದೆ ಶಾಸನಭಂಗ ಚಳವಳಿಯನ್ನು ಪ್ರಾರಂಭಿಸಿತು. ಸರ್ವಾಧಿಕಾರಿಯಾಗಿ ಅಧಿಕಾರ ವಹಿಸಿಕೊಡ ಟಿ.ಸಿದ್ದಲಿಂಗಯ್ಯನವರು "ಚಳವಳಿಯು ರಾಜ್ಯಾದ್ಯಂತ ಗಾಂಧೀಜಿಯವರ ತತ್ವಗಳ ಮಾರ್ಗದರ್ಶನದಲ್ಲಿಯೇ ನಡೆಯುತ್ತದೆ." ಎಂದು ಘೋಷಿಸಿದರು.[೩೧] ಒಂದು ವೇಳೆ ಸರ್ವಾಧಿಕಾರಿಯಾಗಿ ಬಂಧಿಸಲ್ಪಟ್ಟರೆ ಅವರ ನಂತರದ ಡಿಕ್ಟೇಟರರನ್ನು ನೇಮಿಸುವ ಅಧಿಕಾರವನ್ನು ಡಿಕ್ಟೇಟರ್‌ಗೆ ನೀಡಲಾಗಿತ್ತು. ಸೆಪ್ಟೆಂಬರ್ ೧, ೧೯೪೭ ರಂದು ಬನಪ್ಪಾ ಪಾರ್ಕನಲ್ಲಿ ಅವರು ಭಾಷಣ ಮಾಡಿ, ದ್ವಿತೀಯ ಮಹಾಯುದ್ಧದಲ್ಲಿ ಭಾರತ ಪಾಲ್ಗೊಳ್ಳುವ ವಿರುದ್ಧ ಮಾತನಾಡಿ ಜವಾಬ್ದಾರಿ ಸರಕಾರದ ರಚನೆಗೆ ಒತ್ತಾಯಿಸಿ ಭಾಷಣ ಮಾಡುತ್ತಾರೆ. ಸಿದ್ದಲಿಂಗಯ್ಯನವರನ್ನು ಬಂಧಿಸಿದಾಗ ಎಚ್.ಸಿ. ದಾಸಪ್ಪ ಎರಡನೇ ಡಿಕ್ಟೇಟರ್, ಎಸ್. ನಿಜಲಿಂಗಪ್ಪ ೩ ನೇ ಡಿಕ್ಟೇಟರ್ ಹೀಗೆ ೨೩ ಡಿಕ್ಟೇಟರರು ಕಾಲಾನುಕ್ರಮದಲ್ಲಿ ಬಂಧಿತರಾಗುತ್ತಾರೆ. ಮೈಸೂರು ಕಾಂಗ್ರೆಸ್ಸಿನ ಆದೇಶದಂತೆ ಚಳವಳಿ ರಾಜ್ಯಾದ್ಯಂತ ಆರಂಭವಾಗುತ್ತದೆ.

ಕೋಲಾರ ಜಿಲ್ಲೆಯಲ್ಲಿ ವಿಧಿಸಿದ್ದ ನಿಷೇದಾಜ್ಞೆಯನ್ನು ಮುರಿಯಲು ಗಣಿ ಸತ್ಯಾಗ್ರಹವನ್ನು ಕೈಗೊಳ್ಳಲಾಯಿತು. ಸತ್ಯಾಗ್ರಹ ಶಿಬಿರವನ್ನು ಬೌರಿಂಗ್ ಪೇಟೆಯಲ್ಲಿ ಸ್ಥಾಪಿಸಲಾಯಿತು. [೩೨] ಎಂ. ದೊರೆಸ್ವಾಮಿಯವರು ಕೆ.ಜಿ.ಎಫ್ ಸತ್ಯಾಗ್ರಹಕ್ಕಾಗಿ ಸತ್ಯಾಗ್ರಹ ಶಿಬಿರವನ್ನು ಬಂಗಾರ ಪೇಟೆಯ ಒಂದು ಮನೆಯಲ್ಲಿ ಸ್ಥಾಪಿಸಿದರು. ಗಣಿಪ್ರದೇಶದ ಕಾರ್ಮಿಕ ವರ್ಗವು ಉದಾರ ಧನ ಸಹಾಯ ಮಾಡಿತು. ಹಳ್ಳಿರೈತರ ವೇಷ ಧರಿಸಿದ ೨೦–೨೫ ಸತ್ಯಾಗ್ರಹಿಗಳು ಅಲ್ಲಿಂದ ರಾಬರ್ಟ್‌ಸನ್ ಪೇಟೆ ರೈಲ್ವೆ ಸ್ಟೇಷನ್‌ಗೆ ಏರಿ ತ್ರಿವರ್ಣ ಧ್ವಜವನ್ನು ಕಿಟಕಿಯಿಂದ ಹೊರಹಾಕಿ ಜಯಘೋಷ ಮಾಡುತ್ತಿದ್ದರು. ಇವರನ್ನು ಬಂಧಿಸಿ ಕಾಡಿನಲ್ಲಿ ಫರ್ಲಾಂಗಿಗೆ ಒಬ್ಬರನ್ನು ಬಿಡುತ್ತಿದ್ದರು. ಪ್ರತಿನಿತ್ಯ ಹೀಗೆ ತಂಡಗಳು ಹೋಗುತ್ತಿದ್ದವು.[೩೩] ಕೋಲಾರ ಜಿಲ್ಲಾ ಮ್ಯಾಜಿಸ್ಟ್ರೇಟರು ಹೊರಡಿಸಿದ್ದ ಪ್ರತಿಬಂಧಕಾಜ್ಞೆ ಮುರಿಯಲು ಬೌರಿಂಗ್ ಪೇಟೆ ಸತ್ಯಾಗ್ರಹ ಶಿಬಿರದ ಮೇಲ್ವಿಚಾರಕರಾದ ಎಂ. ದೊರೆಸ್ವಾಮಿ ಮತ್ತು ಆರ್. ರಾಘವರೆಡ್ಡಿ ಇವರ ಅನುಮತಿ ಪಡೆದು ವೆಂಕಟರಾಯಪ್ಪ, ಬಿ.ಮುನಿಸ್ವಾಮಯ್ಯ, ಹನುಮಂತರಾಯಪ್ಪ, ಕೆ.ದೊಡ್ಡಬಚ್ಚಪ್ಪ ಮತ್ತು ಕೆ.ಎಂ.ಪುಟ್ಟಸ್ವಾಮಿಯವರನ್ನೊಳಗೊಂಡ ತಂಡವು ೦೧–೯–೧೯೪೭ ರಂದು ಬೆಳಗ್ಗೆ ಊರಿಗಾಂ ರೈಲ್ವೆ ನಿಲಾಣಕ್ಕೆ ಹೋಗುತ್ತಾರೆ. ಆದರೆ ಅವರು ರೈಲ್ವೆ ನಿಲ್ದಾಣದಲ್ಲಿ ಇಳಿದ ತಕ್ಷಣ ಬಂಧಿಸಲ್ಪಡುತ್ತಾರೆ. ಪೊಲೀಸರು ಅವರನ್ನು ವಾಹನದಲ್ಲಿ ಕರೆದುಕೊಂಡು ಹೋಗಿ ಚಿತ್ತೂರು ಜಿಲ್ಲೆಯ ಪುಂಗನೂರು ತಾಲ್ಲೂಕಿನ ಪಕ್ಕದಲ್ಲಿರುವ ಅಡವಿಯಲ್ಲಿ ಅಲ್ಲಲ್ಲಿ ಬಿಟ್ಟು ಬಂದರು. ಆದರೆ ಆ ಸತ್ಯಾಗ್ರಹಿಗಳು ಪುನ್ಧಃ ಒಬ್ಬರನ್ನೊಬ್ಬರು ಸೇರುತ್ತಾ ಹಳ್ಳಿಗರ ಸಹಾಯ ಪಡೆದು ಬೌರಿಂಗ್ ಪೇಟೆಯ ಸತ್ಯಾಗ್ರಹ ಶಿಬಿರ ಸೇರಿದರು. ವಿಶೇಷವೆಂದರೆ ಹಳ್ಳಿಯ ಜನರು ಸತ್ಯಾಗ್ರಹಿಗಳಿಗೆ ಹೂವಿನ ಹಾರ ಹಾಕಿ ಸ್ವಾಗತಿಸಿ, ಸತ್ಯಾಗ್ರಹ ಶಿಬಿರಕ್ಕೆ ಸಾಗಿಸುತ್ತಿದ್ದರು. ಪ್ರತಿನಿತ್ಯ ಸತ್ಯಾಗ್ರಹಿಗಳ ತಂಡಗಳು ಹೋಗುತ್ತಿದ್ದವು. ಸುತ್ತಲು ಹಳ್ಳಿಗಳಿಂದ ನೂರಾರು ಜನ ತಾವಾಗಿಯೇ ಕೆ.ಜಿ.ಎಫ್. ಸತ್ಯಾಗ್ರಹದಲ್ಲಿ ಪಾಲ್ಗೊಂಡರು[೩೪]

ಕೆ.ಜಿ.ಎಫ್. ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಬೆಂಗಳೂರಿನಿಂದ ಬರುವ ಸತ್ಯಾಗ್ರಹಿಗಳನ್ನು ತಡೆಗಟ್ಟುವುದಕ್ಕಾಗಿ ಕೆ.ಜಿ.ಎಫ್. ಗಡಿ ದಾಟದಂತೆ ಕಾವಲು ಇಡಲಾಗಿತ್ತು. ಆದಾಗ್ಯೂ ಕೆ.ಆರ್.ಶ್ರೀಧರಮೂರ್ತಿ, ಎಸ್. ನಾರಾಯಣರಾವ್, ಕೆ.ಶಿಖರಪ್ಪ, ವೆಂಕಟರಮಣಪ್ಪ, ಶಿವಣ್ಣ ಮುಂತಾದ ಸತ್ಯಾಗ್ರಹಿಗಳು ಕಾಲ್ನಡಿಗೆಯಲ್ಲಿಯೇ ಕ್ಯಾಸಂಬಳ್ಳಿ ತಲುಪಿದರು. ಬೆಳಿಗ್ಗೆ ೫–೩೦ರ ವೇಳೆಗೆ ಸೆಂಟ್ರಿಗಳ ಕಣ್ತಪ್ಪಿಸಿ ರಾಬರ್ಟಸನ್ ಪೇಟೆಗೆ ಹೋಗಿ ಘೋಷಣೆ ಕೂಗಿ ಬಂಧನಕ್ಕೊಳಗಾದರು. ಅವರನ್ನು ಒಯ್ದು ನಂಗಲಿ ಅಡವಿಗೆ ಬಿಟ್ಟು ಬರಲಾಗುತ್ತದೆ. ಪುನಃ ಅವರೆಲ್ಲ ಮುಳಬಾಗಿಲು ಬಳಿಯ ಹಳ್ಳಿಯವರ ಸಹಾಯದಿಂದ ದಿಬ್ಬಣದವರೆಂದು ಹೇಳಿ ಬೇತಮಂಗಲದ ಮೂಲಕ ಕೆ.ಜಿ.ಎಫ್ ತಲುಪಿ ಮತ್ತೆ ಘೋಷಣೆ ಕೂಗುವುದು, ಧ್ವಜ ಹಾರಿಸುವ ಮೂಲಕ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. [೩೫] ಅನೇಕ ಜನರು ವಿವಿಧ ರೀತಿಗಳಲ್ಲಿ ಸತ್ಯಾಗ್ರಹ ಆಚರಿಸಿದರು. ಪಿ.ವಿ.ಸೀತಾರಾಮ ಶಾಂತಾನಂದ ಇವರು ಬಂಗಾರಪೇಟೆಯ ಸತ್ಯಾಗ್ರಹ ಸೇರಿದರು. ಪೋಲಿಸರಿಂದ ತಪ್ಪಿಸಿಕೊಳ್ಳುವ ಶಿಕ್ಷಣವನ್ನು ಸತ್ಯಾಗ್ರಹಿಗಳಿಗೆ ಎಂ.ದೊರೆಸ್ವಾಮಿಯವರು ನೀಡಿದರು. ಹಲವರು ಕೆ.ಜಿ.ಎಫ್.ಗೆ ಸ್ವಲ್ಪ ದೂರದಲ್ಲೇ ಇದ್ದ ಆಂದ್ರಪ್ರದೇಶದ ಹಳ್ಳಿಯಲ್ಲಿ ಅವಿತುಕೊಂಡು ಸತ್ಯಾಗ್ರಹಕ್ಕೆ ಬರುತ್ತಿದ್ದರು.[೩೬]

೧೯೪೭ ರ ಸೆಪ್ಟೆಂಬರ್ ೧೫ ರ ವರೆಗೆ ಪೊಲೀಸ್ ಕಲಂ ೪ನ್ನು ಜಾರಿಗೊಳಿಸಿದ್ದರಿಂದ[೩೭] ಮೈಸೂರು ಕಾಂಗ್ರೆಸ್ ಅಲ್ಲಿಯವರೆಗೂ ಕಾನೂನು ಉಲ್ಲಂಘಿಸಲು ತನ್ನ ಕಾಯ್ಯಕರ್ತರಿಗೆ ಸೂಚನೆ ನೀಡಿತು. ಪೋಲಿಸರು ಸತ್ಯಾಗ್ರಹಿಗಳನ್ನು ಬಂಧಿಸಿ ಕಾಡಿಗೆ ಒಯ್ದು ಬಿಡುವುದರಿಂದ ಸ್ಪೂರ್ತಿಗೊಂಡ ಕೋಲಾರ ಜೀಲ್ಲೆಯ ಕಾಯ್ಯಕರ್ತರು ಒಂದು ಸಭೆ ಏರ್ಪಾಡು ಮಾಡಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಭಾಷಣ ಮಾಡಲು ಆಹ್ವಾನಿಸಿರುತ್ತಾರೆ. ಅದರಂತೆ ಹೆಚ್ ಕೆ ವೀರಣ್ಣಗೌಡ, ಕೆ ಸಿ ರೆಡ್ಡಿ, ಕೆ.ಟಿ. ಭಾಷ್ಯಂ ಮೊದಲಾದವರು ೧೩ ಜನ ಕೆ.ಜಿ.ಎಫ್ ಗೆ ಹೋಗುತ್ತಿದ್ದಾಗ ಜಿಲ್ಲಾಧಿಕಾರಿ ಸುಂದರರಾವ್ ನಿಷೇದಾಜ್ಞೆಯ ಎಚ್ಚರಿಕೆ ನೀಡಿದರು. ಜಿಲ್ಲಾಧಿಕಾರಿಯ ಆಜ್ಞೆಯನ್ನು ಧಿಕ್ಕರಿಸಿ ಹೊರಟ ಈ ಕಾಂಗ್ರೆಸ್ ಮುಂಖಡರು ಸ್ವರ್ಣಕುಪ್ಪಂ ಬಳಿ ಹೋದಕೂಡಲೇ ಪೊಲೀಸರು ದಸ್ತಗಿರಿ ಮಾಡಿ ಮಾರನೇ ದಿನ ಕೆ. ಜಿ. ಎಫ್ ಮ್ಯಾಜಿಸ್ಟ್ರೇಟರ ಬಳಿ ಕೊಂಡೊಯ್ದರು. ಮ್ಯಾಜಿಸ್ಟ್ರೇಟರ ಮುಂದೆ ನಿಂತ ಈ ೧೩ ಜನ ಸತ್ಯಾಗ್ರಹಿಗಳು ನಿಷೇದಾಜ್ಞೆ ಧಿಕ್ಕರಿಸುವುದು ನಮ್ಮ ಹಕ್ಕು ಎಂದು ವಾದಿಸಿದರು. ಈ ಎಲ್ಲರಿಗೂ ೩ ತಿಂಗಳ ಶಿಕ್ಷೆ ವಿಧಿಸಿ ಬೆಂಗಳೂರು ಸೆಂಟ್ರಲ್ ಜೈಲಿಗೆ ಹಾಕಿ ಕ್ರಿಮಿನಲ್ ಕೈದಿಗಳಿಗೆ ನೀಡುವ ಶಿಕ್ಷೆ ವಿಧಿಸಿದರು.[೩೮]

ದಿನದಿಂದ ದಿನಕ್ಕೆ ಸತ್ಯಾಗ್ರಹವು ಪ್ರಬಲವಾಗಿ ರಾಜಾದ್ಯಂತ ಸತ್ಯಾಗ್ರಹಿಗಳು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಕೆ.ಜಿ.ಎಫ್‌ಗೆ ಬರತೊಡಗಿದರು. ತುಮಕೂರು ಜಿಲ್ಲೆಯಿಂದ ಕೆ.ಹೆಂಜೇರಪ್ಪ (ವಕೀಲರು) ಅವರು ಸೇರಿದ್ದು ಅವರಿಗೆ ಮೂರು ತಿಂಗಳು ಶಿಕ್ಷೆಯಾಯಿತು. ಮುಂದೆ ಒಂದು ವರ್ಷಕಾಲ ಅವರ ವಕೀಲಿ ಸನದು ಕೂಡಾ ರದ್ದಾಯಿತು. [೩೯].

ಸೆಪ್ಟೆಂಬರ್ ೧೭ ರಂದು ಕೋಲಾರ ಚಿನ್ನದ ಸತ್ಯಾಗ್ರಹ ಆಚರಿಸಲಾಯಿತು. ಆ ದಿನ ಬೃಹತ್ ಸತ್ಯಾಗ್ರಹ ನಡೆದು ಅನೇಕ ಜನರ ದಸ್ತಗಿರಿ ಸಹ ಮಾಡಲಾಯಿತು. ಕೆ.ಜಿ.ಎಫ್ ಸತ್ಯಾಗ್ರಹವು ಸರ್ಕಾರ ಹೊರಡಿಸಿದ್ದ ನಿಷೇದಾಜ್ಞೆ ಮುಗಿಯುವವರೆಗೂ ಯಶಸ್ವಿಯಾಗಿ ನಡೆದು ಆ ಸಂದರ್ಭದಲ್ಲಿ ಹಲವಾರು ನಾಯಕರನ್ನು ಬಂಧಿಸಿ ದೂರದ ಅರಣ್ಯಗಳಲ್ಲಿ ಬಿಟ್ಟು ಬರುವುದು ಸಾಮಾನ್ಯವಾಗಿತ್ತು. ನಾಯಕರ ಬಂಧನ ಪ್ರತಿಭಟಿಸಿ ಕಾಂಗ್ರೆಸ್‌ಗೆ ಬೆಂಬಲವಾಗಿ ಬಂಗಾರಪೇಟೆಯ ಹಲವಾರು ವ್ಯಾಪಾರಸ್ಥರು, ವಿದ್ಯಾರ್ಥಿಗಳು, ಸಾರ್ವಜನಿಕರು ಹರತಾಳ ಆಚರಿಸಿದರು. ಕೆ.ಜಿ.ಎಫ್ ಸತ್ಯಾಗ್ರಹವು ಪ್ರಬಲವಾಗಿ ನಡೆಯುತ್ತಿದ್ದರೂ ಸರ್ಕಾರ

ನಿಷೇದಾಜ್ಞೆಯನ್ನು ತೆಗೆದು ಹಾಕಲು ಮುಂದಾಗಲಿಲ್ಲ. ದಿವಾನರಾದ ಮಿರ್ಜಾರು ಕಾಂಗ್ರೆಸ್ಸನ್ನು ತಲೆ ಎತ್ತದಂತೆ ಸದೆ ಬಡಿಯಲು ನಿರ್ಧರಿಸಿದ್ದರು.[೪೦] ಸರಕಾರವು ತನ್ನ ದಬ್ಬಾಳಿಕೆಯ ನೀತಿಯನ್ನು ಮುಂದಿಟ್ಟು ಚಳುವಳಿಯನ್ನು ಹತ್ತಿಕ್ಕಲು ಪ್ರಯತ್ನಿಸಿದರೂ ಸಹ ಮೊದಲೇ ನಿರ್ಧರಿಸಿದಂತೆ ಚಳುವಳಿಯು ಸೆಪ್ಟೆಂಬರ್ ೧೫ ರ ವರೆಗೆ ನಡೆಯಿತು. ಕೆ.ಜಿ.ಎಫ್ ಸತ್ಯಾಗ್ರಹದಲ್ಲಿ ಸುಮಾರು ೭೦೦ ಜನರು ಬಂಧನಕ್ಕೊಳಗಾದರು. ಕೆಲವರು ಬಂಧಿತರಿಗೆ ಕ್ಷಮಾಪಣೆ ಬರೆದುಕೊಡಿರೆಂದು ಪೋಲಿಸರು ಚಿತ್ರಹಿಂಸೆ ನೀಡಿದರು. ಐ.ಪಿ.ಸಿ ಸೆಕ್ಷನ್ ೪೦೯, ಸಕ್ಷನ್ ೧೩೧, ಸೆಕ್ಷನ್ ೧೨೪(ಎ)ಗಳನ್ನು ಜಾರಿಗೊಳಿಸಿ ಬಂಧನ ನಡೆಯುತ್ತಿದ್ದವು. ಕೆಲವರನ್ನು ಸಂಸ್ಥಾನದಿಂದ ಗಡಿಪಾರು ಮಾಡಲಾಯ್ತು.[೪೧]

ಕೆ.ಜಿ.ಎಫ್ ಸತ್ಯಾಗ್ರಹದಿಂದ ಕಾರ್ಮಿಕ ವರ್ಗವೂ ಪ್ರೇರಿತರಾಗಿ ಸತ್ಯಾಗ್ರಹಕ್ಕೆ ಬೆಂಬಲ ನೀಡಿದ್ದು ಗಮನಾರ್ಹವಾಗಿದೆ. ಎಂ.ಎ.ಪರಶುರಾಂ ಅವರು ಕಾರ್ಮಿಕರಲ್ಲಿ ಶಾಂತಿಯನ್ನು ಕಾಪಾಡಿಕೊಳ್ಳುವ ಸಲುವಾಗಿ ಕಾಂಗ್ರೆಸ್ಸಿನಿಂದ ನಿಯೋಜಿತರಾದರು. ಅಲ್ಲಿನ ಅಕ್ಕಿ ವ್ಯಾಪಾರಿ ಲಕ್ಷ್ಮಣ ಮುದಲಿಯಾರ್ ಅವರ ಸಹಾಯದಿಂದ ದೇಶಭಕ್ತ ಕಾರ್ಮಿಕರ ಮನೆಗೆ ಹೋಗುತ್ತಿದ್ದರು. ಕಾರ್ಮಿಕರು ಸಿಟ್ಟಿನಿಂದ ಸರಕಾರವನ್ನು ಟೀಕಿಸುತ್ತಿದ್ದರು. ಬೆಂಗಳೂರಿನಿಂದ ತಾವು ತಂದಿದ್ದ ಕರಪತ್ರಗಳನ್ನು ಗಣಿಗಳ ಮೂರು ಗೇಟುಗಳ ಬಳಿ ದಾರಿಯುದ್ದಕ್ಕೂ ಇಟ್ಟು ರಾತ್ರಿ ೧೨ ಗಂಟೆಗೆ ಶಿಫ್ಟ್ ಬದಲಾಗುವಾಗ ಒಳಗೆ ಮತ್ತು ಹೊರಗೆ ಬರುವ ಕಾರ್ಮಿಕರಿಗೆ ಅವು ಸಿಗುವ ವ್ಯವಸ್ಥೆ ಮಾಡಿದ್ದರು. ಅದರಿಂದ ಮಿಂಚಿನಂತೆ ಪ್ರಚಾರವಾಗಿ ಚಳವಳಿ ತೀವ್ರವಾಗುತ್ತದೆ.[೪೨]

## ಕೊನೆ ಟಿಪ್ಪಣಿಗಳು


1. ದೊರೆಸ್ವಾಮಿ ಹೆಚ್.ಎಸ್., *ಹೋರಾಟದ ದಿಟ್ಟ ಹೆಜ್ಜೆಗಳು*, ಸಾಹಿತ್ಯ ಮಂದಿರ, ಬೆಂಗಳೂರು, ೨೦೦೬,ಪು–೪೧
2. ಪ್ರೇಮಲತಾ ಸುಂದರೇಶನ್ ಮತ್ತು ಇತರರು (ಸಂ) *ಸ್ವಾತಂತ್ರ್ಯದೆಡೆಗೆ*, ಎಂ.ಎನ್.ಜೋಯಿಸ್ ಅಭಿನಂದನಾ ಗ್ರಂಥ. ಡಿ.ವಿ.ಕೆ ಮೂರ್ತಿ, ಮೈಸೂರು, ೧೯೯೧. ಪು–೧೩೪
3. ಸೂರ್ಯನಾಥ ಕಾಮತ್ ಯು.(ಸಂ)., *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಇನ್ನು ಮುಂದೆ ಎಸ್.ಎಸ್.ಎಸ್* – ಸಂಪುಟ–೩, ಗೀತಾ ಬುಕ್ ಹೌಸ್, ಮೈಸೂರು, ೧೯೮೦. ಪು–೬೬೫
4. ಮೈಸೂರು ಸಿಬಿ ಫೈಲ್–೭–೧೦–೧೯೩೮ ರಿಂದ ೨–೧–೧೯೯
5. ದೊರೆಸ್ವಾಮಿ ಹೆಚ್.ಎಸ್., ಮೇಲಿನದೇ
6. ಬೆಂಗಳೂರು ಜಿಲ್ಲಾ ಕಾನ್ಫಿಡೆನ್ಷಿಯಲ್ ಬ್ರ್ಯಾಂಚ್ ಫೈಲ್ ೧೦–೧–೧೯೩೯ ರಿಂದ ೧೮–೫–೧೯೩೯
7. ಎಂ.ಎನ್.ಜೋಯಿಸ್., ಕರ್ಮಯೋಗಿ–೧ ತಗಡೂರು ರಾಮಚಂದ್ರರಾಯರ ಜೀವನಚರಿತ್ರೆ ಮತ್ತು ಅಭಿನಂದನಾ ಗ್ರಂಥ, ಬೆಂಗಳೂರು, ಪು–೧೫೦
8. ಮೈಸೂರು ಜಿಲ್ಲಾ ಸಿಬಿ–ಫೈಲ್–೧೯೩೯
9. ಪ್ರೋಸಿಡಿಂಗ್ ಅಂಡರ ಸೆಕ್ಷನ್ ೧೦೭ಸಿ ಆರ.ಪಿಸಿ
10. ವಿಶ್ವಕರ್ನಾಟಕ ೨೧–೨–೧೯೩೯ ಪು–೨ ಆರ್.ವಿ ದಾತರ(ಸಂ)
11. ಹಾಲಪ್ಪ ಜಿ.ಎಸ್, ಫ್ರೀಡಂ ಮೂವ್‌ಮೆಂಟ್ ಇನ್ ಕರ್ನಾಟಕ ಸಂ–೨ ಪು–೬೫೯
12. ಪ್ರೇಮಲತಾ ಸುಂದರೇಶನ್ ಮತ್ತು ಇತರರು (ಸಂ) ಮೇಲಿನದೆ, ಪು–೯೯
13. ವಿಶ್ವ ಕರ್ನಾಟಕ ೧೭.೨.೧೯೩೯
14. ಮೈಸೂರು ಜಿಲ್ಲಾ ಸಿಬಿ ಫೈಲ್ ೧೯೩೯
15. ಜನಪದ, ವಾರ್ತಾ ಇಲಾಖೆ, ಕರ್ನಾಟಕ ಸರ್ಕಾರ, ಅಗಸ್ಟ ೧೯೯೬ ಪು–೨೨
16. ಹಾಲಪ್ಪ ಜಿ.ಎಸ್, ಮೇಲಿನದೆ, ಪು–೬೬೦
17. *ಎಸ್.ಎಸ್.ಎಸ್* –೨ ಪು–೩೯೬
18. ಹಾಲಪ್ಪ ಜಿ.ಎಸ್, ಮೇಲಿನದೆ, –೨ ಪು–೬೬೦
19. ಜನಜಾಗೃತಿ ಸಂಘವೂ ಸಹ ಈ ಸತ್ಯಾಗ್ರಹದಲ್ಲಿ ಭಾಗವಹಿಸಿತ್ತು.
20. ಎಂ.ಎನ್.ಜೋಯಿಸ್, ಪು–೧೫೦
21. ಜಿ.ಆರ್ ಸ್ವಾಮಿ ಪು–೨೨೭
22. ಸ್ಟೋರಿ ಆಫ್ ಎ ಸತ್ಯಾಗ್ರಹಿ, ಪು–೨೨೬
23. ಕೋಲಾರ ಜಿಲ್ಲಾ ಸಿ ಬಿ ಫೈಲ್, ಸಂಪುಟ–೨, ಪು–೧೪೬
24. ದೊರೆಸ್ವಾಮಿ ಹೆಚ್.ಎಸ್., ಮೇಲಿನದೆ, ಪು–೪೩
25. ಹಾಲಪ್ಪ ಜಿ.ಎಸ್, ಮೇಲಿನದೆ, ಪು–೬೬೧
26. ದೊರೆಸ್ವಾಮಿ ಹೆಚ್.ಎಸ್., ಮೇಲಿನದೆ
27. ಪ್ರಾಣೇಶರಾವ್.ಬಿ.ಆರ್., ಯಶೋಧರಾ ದಾಸಪ್ಪ ಮತ್ತು ಹೆಚ್.ಸಿ.ದಾಸಪ್ಪ–ಜೀವನ ಮತ್ತು ಸಾಧನೆ, ಭಾರತೀ ಪ್ರಕಾಶನ, ಮೈಸೂರು, ೧೯೯೭, ಪು–೪೪
28. ದೊರೆಸ್ವಾಮಿ ಹೆಚ್.ಎಸ್., ಮೇಲಿನದೆ
29. ಸುಂದರ್ ರಾವ್. ಬ.ನ., ಬೆಂಗಳೂರಿನ ಇತಿಹಾಸ ಪು–೫೭೮
30. ಪ್ರಾಣೇಶರಾವ್.ಬಿ.ಆರ್., ಮೇಲಿನದೆ, ಪು–೪೪–೪೫
31. ಕೆ.ವೀರತಪ್ಪ ಮೈಸೂರ ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳವಳಿ. ವಿಜಯರವಿ ಪ್ರಕಾಶನ, ಬೆಂಗಳೂರು,–೧೯೭೭–ಪು–೭೩
32. *ಎಸ್.ಎಸ್.ಎಸ್* –೩ ಪು–೮೩ ಡಿ.ಲಿಂಗಯ್ಯ–೨೩೫
33. *ಎಸ್.ಎಸ್.ಎಸ್* –೩ ಪು– ೮೨೧–೮೨೨
34. *ಎಸ್.ಎಸ್.ಎಸ್* –೩ ಪು–೮೨೨
35. *ಎಸ್.ಎಸ್.ಎಸ್* –೩ ಪ–ಪು–೭೫೧–೭೫೨
36. ಕ್ವಿಟ–ಇಂಡಿಯಾ ಸ್ಮರಣಸಂಚಿಕೆ–೧೯೯೩ ಪು.ಸಂ–೧೧೨
37. ಸಿಬಿ ಫೈಲ್ಸ ಸಂಪುಟ–೨ ಪು ೧೪೬
38. ವೀರಣ್ಣಗೌಡ ಹೆಚ್.ಕೆ., ಬದುಕು–ಮೆಲುಕು, ಪ್ರಬುದ್ಧ ಪ್ರಕಾಶನ, ಮೈಸೂರು, ೧೯೭೪, ಪು–೧೮೫–೧೮೮
39. ಚನ್ನುಡಿ ತುಮಕೂರು ಜಿಲ್ಲಾ ಪು–೧೪೪
40. ನಾಗಭೂಷಣಗೌಡ. ಪಿ., ಪ್ರಿನ್ಸ್ಲೀ ಸ್ಟೇಟ್ಸ್ ಆಫ್ ಮೈಸೂರ್ ಆ್ಯಂಡ್ ಹೈದರಾಬಾದ್, ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ, ೨೦೦೦
41. ದೊರೆಸ್ವಾಮಿ ಹೆಚ್.ಎಸ್., ಮೇಲಿನದೆ ಪು–೪೭
42. ಪರಶುರಾಮ್–ಕಲೆಕ್ಷನ್ಸ್, ಕರ್ನಾಟಕ ರಾಜ್ಯ ಪತ್ರಾಗಾರ, ಬೆಂಗಳೂರು '